
# ಸಹಸ್ರಮಾನ ವಿಶ್ವಶಾಂತಿ ಸಮ್ಮೇಳನ



ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕೇಂದ್ರ

೨೦೦೦, ಆಗಸ್ಟ್ ೨೮ರಿಂದ ೩೧ ರವರಗೆ ನ್ಯೂಯಾರ್ಕ್‌ನಲ್ಲಿರುವ ವಿಶ್ವ ಸಂಸ್ಥೆಯ ಪ್ರಧಾನ ಕೇಂದ್ರದಲ್ಲಿ ಸಹಸ್ರ ಮಾನ ವಿಶ್ವಶಾಂತಿ ಸಮ್ಮೇಳನವು ಜರುಗಿತು.

ವಿಶ್ವದ ಧಾರ್ಮಿಕ ಮತ್ತು ಆಧ್ಯಾತ್ಮಿಕ ನೇತಾರರ ಶಾಂತಿ ಸಮ್ಮೇಳನದ ಕಲ್ಪನೆ ಹುಟ್ಟಿದ್ದು ೧೯೯೭ರಲ್ಲಿ, ವಿಶ್ವಸಂಸ್ಥೆ ಶಾಂತಿಯ ನೂತನ ಮಾರ್ಗಗಳ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಂಡಾಗ. ಕಾರಣ ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ರಾಜಕಾರಣಿಗಳು ಮತ್ತು ರಾಜ್ಯತಂತ್ರಜ್ಞರುಗಳ ಮೂಲಕ ನಿರಂತರ ಶಾಂತಿಯನ್ನು ಪಡೆಯುವ ಪ್ರಯತ್ನ ವಿಫಲ ವಾಯಿತು. ಇತಿಹಾಸಜ್ಞ ಪಿ. ಹಂಟಿಂಗ್‌ಟನ್ ಹೇಳುವಂತೆ, ೧೯೯೦ರ ದಶಕದಲ್ಲಿ ನಡೆದ ಯುದ್ಧಗಳಲ್ಲಿ ೭೫ ಭಾಗದಷ್ಟು ನಡೆದಿದ್ದು ಜಗತ್ತಿನ ಎರಡು ಅತಿ ದೊಡ್ಡ ಮೂಲಭೂತವಾದಿ ಧರ್ಮಗಳ ಪ್ರೋತ್ಸಾಹದಿಂದಲೇ.

ಶ್ರೀ ಬಾವಾ ಜೈನ್ ಈ ಶಾಂತಿ ಸಮ್ಮೇಳನದ ಪ್ರಧಾನ ಕಾರ್ಯ ದರ್ಶಿಗಳು. ಮೂರು ವರ್ಷಗಳ ಕಾಲ ಅವರು ಈ ಸಮ್ಮೇಳನದ ಯೋಜನೆಗೆ, ಹಲವಾರು ದೇಶಗಳಿಗೆ ವಿಸ್ತೃತ ಪ್ರವಾಸ ಕೈಗೊಂಡರು. ಹಲವಾರು ಮತಧರ್ಮಗಳಿಗೆ ಸೇರಿದ ನೂರಾರು ಮುಖಂಡರನ್ನು ಭೇಟಿಯಾದರು. ಇದರ ಫಲವೇ ೩೦೦ ಧಾರ್ಮಿಕ ನೇತಾರರು ಹಾಗೂ ೬೦೦ ಅನುಯಾಯಿಗಳು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದ ಈ ಐತಿಹಾಸಿಕ ಸಮ್ಮೇಳನ.

ಆಗಸ್ಟ್ ೨೮, ಅಪರಾಹ್ನ ೩.೪೫ರ ಸಮಯ. ಹಲವಾರು ವರ್ಣಗಳು ಮತ್ತು ಧಾರ್ಮಿಕ ಚಿಹ್ನೆಗಳಿಂದ ಕೂಡಿದ ಪೋಷಾಕುಗಳನ್ನು ಧರಿಸಿದ ಧರ್ಮಗುರುಗಳು ವಿಶ್ವಸಂಸ್ಥೆಯ ಮುಖ್ಯ ಸಭಾಂಗಣವನ್ನು ಪ್ರವೇಶಿಸಲು ಸಾಲುಗಟ್ಟಿ ನಿಂತಿದ್ದಾರೆ. ಇದೊಂದು ಅಪೂರ್ವ ದೃಶ್ಯ. ಹೊರ ಅಂಗಣದಲ್ಲಿ ಅವರನ್ನು ಸ್ವಾಗತಿಸು ತ್ತಿದ್ದವರು ಭಾರತೀಯ ಬಾಲಕರು ಮತ್ತು ಬಾಲಕಿಯರು, ಭಾರತೀಯ ಉಡುಪನ್ನು ಧರಿಸಿದ್ದವರು. ನವಿಲುಗರಿಗಳು ಅವರ ತಲೆಯ ಮೇಲಿನ ಕ್ಯಾಪ್‌ಗಳನ್ನು ಅಲಂಕರಿಸಿದ್ದವು. ವೇದಮಂತ್ರವಾದ **ಸಂಗಚ್ಛಧ್ವಂ ಸಂವದಧ್ವಂ........** ರವೀಂದ್ರನಾಥ ಠಾಕೂರರ ಸಂಗೀತ ಸಂಯೋಜನೆಯೊಂದಿಗೆ, ವೃಂದಗಾನದ ಮಧುರ ನಿನಾದದೊಂದಿಗೆ ಕೇಳಿ ಬರುತ್ತಿತ್ತು. ಈ ದೃಶ್ಯ ಸಹಜವಾಗಿಯೇ ಭಾರತದಿಂದ ಬಂದಿದ್ದ ಸಮಾರು ನೂರು ಧಾರ್ಮಿಕ ಮುಖಂಡರು ಮತ್ತು ಇನ್ನೂರು ನಿರೀಕ್ಷಕರ ಮನದಾಳಗಳನ್ನು ಕಲಕಿತು, ಮಧುರ ಸ್ಮರಣೆಗಳನ್ನು ಉಂಟುಮಾಡಿತು.

ಭಾಷಣ ಮಾಡಿದ ಹಿಂದೂ ಸಂಪ್ರದಾಯದ ಸಂನ್ಯಾಸಿಗಳು ಐದು ಜನ. ಅವರೆಂದರೆ ಸ್ವಾಮಿ ದಯಾನಂದ (ಆರ್ಷ ವಿದ್ಯಾ ಗುರುಕುಲ), ಸ್ವಾಮಿ ಜಿತಾತ್ಮಾನಂದ (ರಾಮಕೃಷ್ಣ ಮಿಷನ್), ಸ್ವಾಮಿ ಚಿದಾನಂದ (ಪರಮಾರ್ಥ ನಿಕೇತನ, ಋಷಿಕೇಶ್) ಸತ್ಯ ಮಿತ್ರಾನಂದ (ಹರಿದ್ವಾರ್) ಮತ್ತು ಸ್ವಾಮಿ ದಿವ್ಯಾನಂದ, (ಶಂಕರಾಚಾರ್ಯ ಮಠ, ಭಾನ್‌ಪುರ).

ರಾಮಕೃಷ್ಣ ಮಿಷನ್ನಿನ ಸ್ವಾಮಿ ಜಿತಾತ್ಮಾನಂದಜಿ ಅವರು ಆಗಸ್ಟ್ ೨೯ರಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಹಾಲ್‌ನಲ್ಲಿ ಸಂಜೆ ೪.೨೭ ರಿಂದ ೪.೩೪ ರವರೆಗೆ ಮಾಡಿದ ಭಾಷಣದ ಪೂರ್ಣಪಾಠ ಇದು :

ಎಲ್ಲ ಧರ್ಮಗಳ ಮತ್ತು ಎಲ್ಲ ನಾಡುಗಳ ಸಹೋದರ ಸಹೋದರಿಯರೆ, ಎಲ್ಲ ಧರ್ಮ ಮತ್ತು ಎಲ್ಲ ನಾಡುಗಳ ಪೂಜ್ಯರೇ ಮತ್ತು ಮಾನ್ಯರೆ,

ಭಾರತದೇಶದ ಪರವಾಗಿ, ಹಿಂದೂಧರ್ಮ ಹಾಗೂ ನನ್ನ ರಾಮಕೃಷ್ಣ ಮಿಷನ್ನಿನ ಪರವಾಗಿ ನಿಮಗೆಲ್ಲರಿಗೂ ನನ್ನ ವಂದನೆ ಗಳನ್ನು ಸಮರ್ಪಿಸುತ್ತೇನೆ. ಹಿಂದೂಭಾವನೆಯ ಪ್ರಕಾರ ನೀವಾರೂ ಹುಟ್ಟಿನಿಂದಲೇ ಪಾಪಿಗಳಲ್ಲ, ಬದಲಾಗಿ ಜನ್ಮತಃ

> **‘ಸತ್ಯ ಒಂದೇ. ಭಗವಂತನು ಒಬ್ಬನೇ. ಋಷಿಗಳು ಅವನನ್ನು ಹಲವಾರು ಹೆಸರುಗಳಿಂದ ಕರೆಯುವರು.’**

ಭಗವತ್ಸ್ವರೂಪರು ನೀವು. ನಮ್ಮ ಈ ಸಾಂತ ದೇಹಗಳಲ್ಲಿ ಅಡಗಿರುವನು ಅನಂತ ಪರಮಾತ್ಮ. ನಿಮಗೆಲ್ಲ ನನ್ನ ನಮನಗಳು. ನೀವೆಲ್ಲ ಜೀವಂತ ಬುದ್ಧರು, ಜೀವಂತ ಕ್ರಿಸ್ತರು (ಕರತಾಡನ). ಪುರಾತನ ಭಾರತದ ಹಿಂದೂಗಳು ಭಗವಂತನು ಅನಂತನೂ ಸೂಕ್ಷ್ಮಾತಿ ಸೂಕ್ಷ್ಮನೂ ಎಂದು ಸಾಕ್ಷಾತ್ಕರಿಸಿಕೊಂಡಿದ್ದರು. ಆದ್ದರಿಂದ ಆ ಅನಂತ ಸ್ವರೂಪನನ್ನು ಸೇರುವ ಮಾರ್ಗಗಳೂ ಅನಂತವಿರಲೇಬೇಕು. ಹಾಗೆಂದೇ ಅವರು ಉದ್ಘೋಷಿಸಿದರು: ‘ಸತ್ಯ ಒಂದೇ. ಭಗವಂತನು ಒಬ್ಬನೇ. ಋಷಿಗಳು ಅವನನ್ನು ಹಲವಾರು ಹೆಸರುಗಳಿಂದ ಕರೆಯುವರು.’ ನಾವು ಎಲ್ಲ ಧರ್ಮಗಳನ್ನು ಮತ್ತು ಎಲ್ಲ ಆಚರಣೆಗಳನ್ನು ಒಪ್ಪಿಕೊಳ್ಳುವೆವು. ಆದರೆ ನಮಗೆ ತಿಳಿದಿದೆ, ಸತ್ಯ ಒಂದೇ, ಸತ್ಯವೇ ದೇವರು ಹಾಗೂ ಆ ದೇವರು ನಮ್ಮೊಳಗೇ ಇದ್ದಾನೆ ಎಂದು (ಕರತಾಡನ). ನಿನ್ನೆಯಿಂದ ನನಗೆ ಬಾವಾ ಜೈನರ ಬಗ್ಗೆಯೇ ಚಿಂತೆ. ವಿಶ್ವ ಶಾಂತಿಯ ಕನಸು ಕಾಣುತ್ತಿರುವ ಆ ಯುವಕನ ಬಗ್ಗೆಯೇ ಯೋಚನೆ. ಇತರ ಭಾಷಣಕಾರರ ಅದ್ಭುತ ಚಿಂತನೆಗಳ ಬಗ್ಗೆಯೂ ಯೋಚಿಸುತ್ತಿದ್ದೆ. ಆದರೆ, ಕೆಲವು ಚಿಂತನೆಗಳು ಬಹು ನೋವನ್ನುಂಟುಮಾಡಿದವು. ‘ಕ್ರಿಸ್ತನೊಬ್ಬನೇ ದೇವಪುತ್ರ’ ಎಂದು ನಾನು ಆಲಿಸಿದಾಗ ದಿಗ್ಭ್ರಮೆಗೊಂಡೆ. ಯೇಸು ಕ್ರಿಸ್ತನು ಖಂಡಿತವಾಗಿಯೂ ಭಗವಂತನ ಪುತ್ರನು. ಹಾಗಾದರೆ, ಬುದ್ಧ,ಮಹಾವೀರ ಮತ್ತು ಪ್ರವಾದಿ ಮಹಮ್ಮದರ ಗತಿಯೇನು? ಅವರೆಲ್ಲರೂ ಆ ಪರಮಾತ್ಮನ ಪ್ರಿಯಪುತ್ರರಲ್ಲವೇನು? ಅವರೆಲ್ಲರೂ ಭಗವಂತನ ಪುತ್ರರೇ ಅಲ್ಲವೇನು? ‘ಕ್ರಿಸ್ತನು ದೇವಪುತ್ರ’ ಎಂದು ನಾನು ಹೇಳಿದೆನೆಂದುಕೊಳ್ಳಿ. ಆಗ ಅದು ಸಮಂಜಸವಾದುದು. ಆದರೆ ‘ಕ್ರಿಸ್ತನೊಬ್ಬನೇ ದೇವಪುತ್ರ’ ಎಂದು ಹೇಳಿದ ಗಳಿಗೆಯಿಂದ ನಾನು ವೈಷಮ್ಯ ಮತ್ತು ಮೂಲಭೂತವಾದಗಳ ಬೀಜವನ್ನು ಹುಟ್ಟು ಹಾಕುತ್ತೇನೆ (ದೊಡ್ಡದಾಗಿ ಕರತಾಡನ).

ಸಹೋದರಿಯರೇ, ಸಹೋದರರೇ, ಭಾರತದ ಹಿಂದೂಗಳು ಚರ್ಚ್‌ಗಳಿಗೆ, ಮಸೀದಿಗಳಿಗೆ ಹೋಗುತ್ತಾರೆ. ಗುರುದೇವ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಅನುಯಾಯಿ ಹಿಂದೂಗಳಾದ ನಾವು ಕೇವಲ ಚರ್ಚ್‌ಗಳಿಗೆ, ಮಸೀದಿಗಳಿಗೆ ಹೋಗುವುದಷ್ಟೇ ಅಲ್ಲ, ನಿಮಗೆ ಗೊತ್ತೇನು, ನಾವು ಕ್ರಿಸ್‌ಮಸ್ ಹಬ್ಬವನ್ನು ನಮ್ಮ ಹಿಂದೂ ದೇಗುಲಗಳಲ್ಲಿ ಶ್ರದ್ಧೆ ಮತ್ತು ವೈಭವಗಳಿಂದ ಆಚರಿಸುತ್ತೇವೆಂದು? ನಾವು ಈದ್ ಹಬ್ಬವನ್ನು ಆಚರಿಸಿ, ನಮ್ಮ ಮುಸ್ಲಿಂ ಬಾಂಧವರನ್ನು ಅಪ್ಪಿಕೊಳ್ಳುತ್ತೇವೆ. ಇದಲ್ಲದೆ ಭಗವಾನ್ ಮಹಾವೀರ, ಗುರು ನಾನಕ್ ಮತ್ತು ಬುದ್ಧನ ಜನ್ಮ ಜಯಂತಿಗಳನ್ನು ನಾವು ಆಚರಿಸುತ್ತೇವೆಂದು ನಿಮಗೆ ತಿಳಿದಿದೆಯೇನು? ಆದರೆ, ಇಡೀ ಜಗತ್ತಿನಲ್ಲಿ ಒಂದಾದರೂ ಕ್ರೈಸ್ತೇತರ ಉತ್ಸವನ್ನು ಆಚರಿಸುವ ಒಂದಾದರೂ ಕ್ರೈಸ್ತ ಚರ್ಚ್ ಅನ್ನು ನಾನು ಅರಿಯೆ. **ಶಾಂತಿಯೆಂಬುದು ಏಕಮುಖವಲ್ಲ. ಶಾಂತಿ ಎಲ್ಲ ದಿಕ್ಕುಗಳಿಂದಲೂ ಹರಿದು ಬರಬೇಕು** (ಕರತಾಡನ). ನಾವು ಧರ್ಮಸಹಿಷ್ಣುತೆಯನ್ನು ನಂಬುವುದಿಲ್ಲ. ಏಕೆಂದರೆ ಸಹಿಷ್ಣುತೆ ಅಂದರೆ ಅಸಹ್ಯವಾದುದನ್ನು ಹೇಗೋ ಸಹಿಸಿಕೊಂಡಿರುವುದು. ಹಿಂದೂಗಳಾದ ನಾವು ನಿಮ್ಮ ಧರ್ಮವನ್ನು ಒಪ್ಪಿಕೊಳ್ಳುವುದು ಮಾತ್ರವಲ್ಲ, ನಮ್ಮ ದೇವಾಲಯಗಳಲ್ಲಿ ನಿಮ್ಮ ಹಬ್ಬಗಳನ್ನೂ ಆಚರಿಸುತ್ತೇವೆ. ಶ್ರೀ ಬಾವಾ ಜೈನರು ನಮಗೆಲ್ಲಾ ಬರೆದರು "ನಾನು ಹಳೆಯ ಮಾರ್ಗಗಳಿಂದ ನಿರಾಸೆಹೊಂದಿದ್ದೇನೆ" ಎಂದು. ಅವರು ಹಿಂಸೆಯನ್ನು ಅಂತ್ಯಗೊಳಿಸುವ, ಶಾಂತಿಯನ್ನು ಸಂಸ್ಥಾಪಿಸುವ ಹೊಸಮಾರ್ಗಗಳನ್ನು ಬಯಸುತ್ತಾರೆ. ಮಾನ್ಯ ಬಾವಾ ಜೈನ್ ಅವರೇ, ದಯವಿಟ್ಟು ನೆನಪಿಡಿ. ಇದೇ ಶಾಂತಿಗಾಗಿನ ನೂತನ ಮಾರ್ಗ – ಬರಿಯ ಸಹಿಷ್ಣುತೆಯಲ್ಲ, ಒಪ್ಪಿಕೊಳ್ಳುವುದಕ್ಕೇ ಅಲ್ಲ, ನಿಮ್ಮ ಸ್ವಂತ ದೇವಾಲಯಗಳಲ್ಲಿ ಇತರ ಧರ್ಮಗಳ ಆಚರಣೆಗಳನ್ನೂ ಆಚರಿಸುವುದು (ಕರತಾಡನ). ನಾವು ಕಳೆದ ನೂರು ವರ್ಷಗಳಿಂದ ಇದನ್ನು ಮಾಡುತ್ತ ಬಂದಿದ್ದೇವೆ. ಈಗಲಾದರೂ, ವಿಶ್ವಸಮುದಾಯವು ಇದಕ್ಕೆ ಪ್ರತಿಸ್ಪಂದಿಸಬಾರದೆ?

> **ಧರ್ಮಗಳು ಅಥವಾ ಸಮಾಜಗಳು ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ಇಲ್ಲದಿದ್ದರೆ ಅವು ಸಾಯುವವು. ಸತ್ಯತತ್ವಗಳು ಸಾರ್ವತ್ರಿಕವಾದುವು. ಒಂದು ಸತ್ಯವಾಗಿದ್ದರೆ, ಅದು ನನಗೂ ಸತ್ಯ, ನಿಮಗೂ ಸತ್ಯ, ಎಲ್ಲರಿಗೂ ಸತ್ಯವೇ.**

ಇನ್ನೊಂದು ವಿಷಯ. ಕ್ರೈಸ್ತನೊಬ್ಬನು ಇಸ್ಲಾಂ ಧರ್ಮದ ತತ್ತ್ವಗಳನ್ನು ಒಪ್ಪದಿರಬಹುದು. ಹಾಗೆಯೇ, ಮುಸ್ಲಿಮನೊಬ್ಬನು ಕ್ರೈಸ್ತಧರ್ಮದ ಭಾವನೆಗಳನ್ನು ಪರಿಗಣಿಸದಿರಬಹುದು. ಆದರೆ ಎಲ್ಲರೂ ನ್ಯೂಟನ್ನನ ಗುರುತ್ವಾಕರ್ಷಣೆಯ ನಿಯಮವನ್ನು ಅಥವಾ ಐನ್‌ಸ್ಟೈನನ ಸಾಪೇಕ್ಷ ಸಿದ್ಧಾಂತವನ್ನು ಒಪ್ಪಲೇಬೇಕು. ಏಕೆಂದರೆ ಅವು ಸಾರ್ವತ್ರಿಕ ಸತ್ಯಗಳು. ವಿಶ್ವಸಂಸ್ಥೆಯ ಇಪ್ಪತ್ತನೆಯ ಮಹಡಿಯನ್ನು ಏರಿ " ನಾನು ನ್ಯೂಟನ್ನನ ಗುರುತ್ವಾಕರ್ಷಣೆಯ ನಿಯಮವನ್ನು ನಂಬುವುದಿಲ್ಲ" ಎಂದು ಹೇಳುತ್ತ ಗಾಳಿಯಲ್ಲೇ ನಡೆದಾಡಲು ನಾನು ಆರಂಭಿಸಿದೆನೆಂದುಕೊಳ್ಳಿ. ಆಗ ಏನಾಗುವುದು? ನಾನು ಸಾವನ್ನಪ್ಪುತ್ತೇನೆ, ಅಷ್ಟೇ. ಸತ್ಯ ಯಾವ ಸಮಾಜವನ್ನೂ ಅಥವಾ ಯಾವ ಧರ್ಮವನ್ನೂ ಲೆಕ್ಕಿಸದು. ಧರ್ಮಗಳು ಅಥವಾ ಸಮಾಜಗಳು ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ಇಲ್ಲದಿದ್ದರೆ ಅವು ಸಾಯುವವು (ಕರತಾಡನ). ಸತ್ಯತತ್ವಗಳು ಸಾರ್ವತ್ರಿಕವಾದುವು. ಒಂದು ಸತ್ಯವಾಗಿದ್ದರೆ, ಅದು ನನಗೂ ಸತ್ಯ, ನಿಮಗೂ ಸತ್ಯ, ಎಲ್ಲರಿಗೂ ಸತ್ಯವೇ (ಕರತಾಡನ).

ಕ್ವಾಂಟಂ ಸಿದ್ಧಾಂತ, ಆಧುನಿಕ ಭೌತಶಾಸ್ತ್ರ, ನರಸಂವಹನಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರಗಳ ಇತ್ತೀಚಿನ ಬೆಳವಣಿಗೆಗಳಿಂದ ಎರಡು ಮಹಾನ್ ಸತ್ಯಗಳು ಹೊರಹೊಮ್ಮಿವೆ. ಈ ಮಹಾನ್ ಸತ್ಯಗಳು ಸಾರ್ವತ್ರಿಕವಾದವುಗಳು. ಒಂದು, **ಸಾಂತವು ಅನಂತದೊಂದಿಗೆ ಸದಾ ಸಂಬಂಧಹೊಂದಿರುತ್ತದೆ** ಎಂಬುದು. ಸಾಂತ

> **ಸಹೋದರರೇ, ನಾವು ನಮ್ಮ ಹೃದಯವನ್ನು ವಿಶಾಲಗೊಳಿಸಿಕೊಳ್ಳಬೇಕು. ನಾವು ವಿಚಾರಪರರಾಗಬೇಕು ಮತ್ತು ನಮ್ಮ ಧರ್ಮಗಳನ್ನು ವೈಚಾರಿಕಗೊಳಿಸಬೇಕು.**

ಮನುಷ್ಯ ಅನಂತ ಭಗವಂತನೊಡನೆ ಸಂಬಂಧಪಟ್ಟಿರುತ್ತಾನೆ. ಇದೇ ಅದರ ಅಂತರಾರ್ಥ. ಯೇಸುವು ಹೇಳಿದ್ದು ಇದನ್ನೇ: "ದೈವ ಸಾಮ್ರಾಜ್ಯ ನಿಮ್ಮೊಳಗೇ ಇದೆ" ಹಾಗೂ "ನಾನು ಮತ್ತು ನನ್ನ ತಂದೆಯು ಒಬ್ಬರೇ" (ಕರತಾಡನ). ಎರಡನೆಯ ಸತ್ಯವು ಬೆಲ್‌ನ ಸಿದ್ಧಾಂತದ ಪ್ರಾಯೋಗಿಕ ಪರೀಕ್ಷೆಯಿಂದ ಹೊಮ್ಮಿದುದು. ಅದೆಂದರೆ ನಾವೆಲ್ಲ ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿದ್ದೇವೆ ಎಂದು. ಭೌತಿಕವಾಗಿ, ಆಧ್ಯಾತ್ಮಿಕವಾಗಿ ಮಾತ್ರವಲ್ಲ, ನಾವೆಲ್ಲರೂ ಪರಸ್ಪರ ಸಂಬಂಧ ಹೊಂದಿದ್ದೇವೆ. ಅಂಡ್ರೋಮೆಡಾ ಗ್ಯಾಲಕ್ಸಿಯೂ ಕೂಡಿಕೊಂಡಂತೆ ಭೌತಿಕವಾಗಿ ನಾವೆಲ್ಲರೂ ಸಂಬಂಧಿಗಳೇ.

ಶೇಕ್ಸ್ಪಿಯರ್ ಹೇಳುತ್ತಾನೆ ಮ್ಯಾಕ್‌ಬೆತ್‌ನು ತನ್ನ ನಿದ್ರೆಯನ್ನು ಹತ್ಯೆಗೈದಿದ್ದಾನೆ, ಆದ್ದರಿಂದ ಮ್ಯಾಕ್‌ಬೆತ್ ಇನ್ನು ಮುಂದೆ ನಿದ್ರಿಸಲಾರ ಎಂದು. ನಾನು ನಿಮ್ಮನ್ನು ಕೊಂದರೆ, ನನ್ನ ಉಳಿದ ಜೀವಿತಕಾಲದಲ್ಲಿ ನನ್ನ ನಿದ್ರೆಯನ್ನೇ ನಾನು ಕೊಂದಂತಾಗುತ್ತದೆ. ಮೇಲೆ ಹೇಳಿದ ಎರಡು ಸತ್ಯತತ್ತ್ವಗಳು ಎಲ್ಲ ಧರ್ಮಗಳ ಅಡಿಪಾಯಗಳಾಗಿವೆ. ಸಹೋದರ ಸಹೋದರಿಯರೇ, ಮುಸ್ಲಿಂ, ಕ್ರೈಸ್ತ ಮತ್ತು ಹಿಂದೂ ಬಾಂಧವರೇ, ನಾವಿಂದು ನಮ್ಮ ಧರ್ಮಗಳನ್ನು ಆಚರಿಸುತ್ತಿರುವುದು ಮತಾಂಧತೆಯ ಆಧಾರದ ಮೇಲೆ. ಆದರೆ ಮುಂದೆ, ವೈಜ್ಞಾನಿಕವಾಗಿ ಮುಂದುವರೆದ ಮತ್ತು ತಾಂತ್ರಿಕತೆಯ ಈ ಯುಗದಲ್ಲಿ , ವಿಚಾರಪರ ಭಾಷೆಯಲ್ಲಿ ನಮ್ಮ ಧರ್ಮಗಳನ್ನು ನಾವು ವಿವರಿಸಲಾಗದಿದ್ದರೆ, ನಮ್ಮ ಮಕ್ಕಳೇ ನಮ್ಮನ್ನು ತಿರಸ್ಕರಿಸುತ್ತಾರೆ, ಅಪಹಾಸ್ಯಮಾಡುತ್ತಾರೆ. ಸಹೋದರರೇ, ನಾವು ನಮ್ಮ ಹೃದಯವನ್ನು ವಿಶಾಲಗೊಳಿಸಿಕೊಳ್ಳಬೇಕು. ನಾವು ವಿಚಾರಪರರಾಗಬೇಕು ಮತ್ತು ನಮ್ಮ ಧರ್ಮಗಳನ್ನು ವೈಚಾರಿಕಗೊಳಿಸಬೇಕು.

ಕಡೆಯ ಅಂಶವೆಂದರೆ, ಶ್ರೀ ಬಾವಾ ಜೈನ್ ಅವರು ಬಡತನ ನಿರ್ಮೂಲನದ ಬಗ್ಗೆ ತಮ್ಮ ಪತ್ರದಲ್ಲಿ ಪ್ರಸ್ತಾಪಮಾಡಿದ್ದರು. ಈ ದಿಶೆಯಲ್ಲಿ ಸರ್ಕಾರೇತರ ಸಂಘಸಂಸ್ಥೆಗಳು (NGOs) ಬಹಳಷ್ಟು ಕಾರ್ಯವನ್ನು ಮಾಡುತ್ತಿವೆ. ಆದರೆ ನಿಮಗೊಂದು ವಿಷಯವನ್ನು ಹೇಳಬಯಸುತ್ತೇನೆ. ಇಂದಿನ ಹಿಂದೂಗಳು, ಕಳೆದ ನೂರು ವರ್ಷಗಳಿಂದ ಅದೆಷ್ಟು ಕ್ರಿಯಾಶಾಲಿಗಳಾಗಿದ್ದಾರೆಂದರೆ, ಭಾರತದ ಬಡಜನರ ಉದ್ಧಾರಕ್ಕಾಗಿ ಯಾವುದೇ ಇತರ ಧರ್ಮದ ಸೇವಾಸಂಸ್ಥೆಯ ಆವಶ್ಯಕತೆ ಭಾರತದೇಶಕ್ಕೆ ಇಲ್ಲ (ಕರತಾಡನ) . ನಾನು ಅಂತಹ ಸೇವಾಸಂಘವಾದ ರಾಮಕೃಷ್ಣ ಮಿಷನ್ನಿಗೆ ಸೇರಿದವನಾಗಿದ್ದೇನೆ. ಬಾಳು ಭೀಕರವಾಗಿರುವ ಅತಿ ಕತ್ತಲ ಪ್ರದೇಶಗಳಿಗೆ ನಾನು ಹೋಗಿದ್ದೇನೆ. ಭಾರತದ ಕಡುಬಡವರಿಗಾಗಿ ಸಹಸ್ರಾರು ಭಾರತೀಯ ಸಂನ್ಯಾಸಿಗಳು ಪ್ರಾಣಾರ್ಪಣೆ ಮಾಡಿದ್ದಾರೆ. ಬೇರೆ ಯಾವ ಧಾರ್ಮಿಕ ಸಂಸ್ಥೆಗಳ ಆವಶ್ಯಕತೆಯೂ ನಮಗಿಲ್ಲ (ಕರತಾಡನ). ನಾವು ಈ ಕಾರ್ಯವನ್ನು ಕೈಗೊಳ್ಳಲು ಆರ್ಥಿಕವಾಗಿ, ಭೌತಿಕವಾಗಿ, ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸಮರ್ಥರಿದ್ದೇವೆ.

ಬಡತನ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ. ಅಭಿವೃದ್ಧಿ ಹೊಂದದ ದೇಶಗಳಲ್ಲಿ ನಾವು ಆರ್ಥಿಕ ಬಡತನವನ್ನು ಕಾಣುತ್ತೇವೆ. ಆದರೆ, ಯಾವ ದೇಶಗಳು ಅಭಿವೃದ್ಧಿ ಹೊಂದಿರುವವೋ, ಅಲ್ಲಿ ನಾವು ಕಾಣುವುದು ಆಧ್ಯಾತ್ಮಿಕ ದಾರಿದ್ರ್ಯ (ಕರತಾಡನ). ಸುಂದರ ದೇಶವಾದ ಈ ಅಮೇರಿಕಾಕ್ಕೆ ಏನಾಗಿದೆ ? ಜನವರಿ ೧೮ರಂದು ನಾನು ಹಾಲಿವುಡ್‌ನಲ್ಲಿ ಇದ್ದೆ. ಅಂದಿನ ಲಾಸ್ ಏಂಜಲೀಸ್ ಟೈಮ್ಸ್ ಪತ್ರಿಕೆಯಲ್ಲಿ ಬಂದಿದೆ –ಅಮೇರಿಕಾದ ಯುವಪೀಳಿಗೆಯಲ್ಲಿ ಶೇಕಡಾ ೨೧ ಭಾಗದಷ್ಟು ಜನ ಹುಚ್ಚರು ಎಂದು. ಸಂಪದ್ಭರಿತ ದೇಶಗಳಲ್ಲಿ ತಲೆತಿರುಗುವಂತೆ ಏರುತ್ತಲೇ ಹೋಗುತ್ತಿರುವ ಮದ್ಯಪಾನ, ಮಾದಕದ್ರವ್ಯ ಸೇವನೆ, ಮಾನಸಿಕ ಖಿನ್ನತೆ ಮತ್ತು ಆತ್ಮಹತ್ಯೆಗಳ ಬಗ್ಗೆ ಏನು ಹೇಳುತ್ತೀರಿ? ಜಗತ್ತಿನಲ್ಲೇ ಅತಿ ಹೆಚ್ಚು ಆತ್ಮಹತ್ಯೆಗಳಾಗುವ ದೇಶ ಸ್ವೀಡನ್. ಶ್ರೀ ಬಾವಾ ಜೈನ್ ಅವರೇ, ದಯವಿಟ್ಟು ಆಲಿಸಿ (ಸಭಿಕರ ಮಧ್ಯೆ ನಗು ಮತ್ತು ಕರತಾಡನ). ನೀವೊಬ್ಬ ಮೇಧಾವಿ ಬಾಲಕರು. ಆದರೆ, ನೀವಿನ್ನೂ ಬರೀ ಬಾಲಕರು (ನಗು). ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿಗಳ ಪದವಿ ನಿಮಗೆ ಬರುವುದೆಂದು ಎದುರು ನೋಡುತ್ತೇನೆ (ಕರತಾಡನ ). ಆದರೆ ನೆನಪಿಡಿ, ಭವಿಷ್ಯದ ಆವಶ್ಯಕತೆ ಆಧ್ಯಾತ್ಮಿಕ ದಾರಿದ್ರ್ಯದ ನಿರ್ಮೂಲನೆ. ಆ ಆಧ್ಯಾತ್ಮಿಕ ದಾರಿದ್ರ್ಯದ ನಿರ್ಮೂಲನವಾಗುವುದು "ನಾನು ಈ ನಶ್ವರ ದೇಹವಲ್ಲ, ನಾನು ಚೈತನ್ಯ ಸ್ವರೂಪಿ ಹಾಗೂ ಆ ಚೈತನ್ಯ ಅನಂತವಾದುದು" ಎಂದು ಯಾವಾಗಲೂ ಚಿಂತಿಸುವುದರಿಂದ. ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ವೀರನಾಯಕರಾದ ಸ್ವಾಮಿ ವಿವೇಕಾನಂದರು ಮೊದಲಬಾರಿಗೆ, ನೂರು ವರ್ಷಗಳ ಹಿಂದೆ, ಕ್ಯಾಲಿಫೋರ್ನಿಯಾದ ಸಮುದ್ರದಂಡೆಯ ಮುಂದೆ ನಿಂತು ಗುಡುಗಿದ್ದರು " ಕ್ರಿಸ್ತ ಮತ್ತು ಬುದ್ಧರುಗಳು, "ನಾನು" ಎಂಬ ಅನಂತ ಸಾಗರದ ಅಲೆಗಳು ಮಾತ್ರ" ಎಂದು. ಕ್ರಿಸ್ತ ಅಂತರಾಳದಲ್ಲಿ ಸುಪ್ತನಾಗಿದ್ದಾನೆ. ಬುದ್ಧ ಅಂತರಾಳದಲ್ಲಿ ಸುಪ್ತನಾಗಿದ್ದಾನೆ. ಭಗವಂತನೇ ಅಂತರಾಳದಲ್ಲಿ ಸುಪ್ತನಾಗಿದ್ದಾನೆ. ಆ ಸುಪ್ತ ಪರಮಾತ್ಮನನ್ನು ಆಧ್ಯಾತ್ಮಿಕ ಸಂಸ್ಕೃತಿಯಿಂದ ಮೇಲೆಬ್ಬಿಸಬೇಕು. ಆಧ್ಯಾತ್ಮಿಕ ಸಂಸ್ಕೃತಿ ಮಾನವರ ಸಾಂತ ದೇಹದಲ್ಲಿರುವ ಅನಂತತೆಯನ್ನು ಅಭಿವ್ಯಕ್ತಗೊಳಿಸುವುದು. ಅದು ಹೇಗೆ ? ನಿಮಗೆಲ್ಲಾ ಹೇಗೆ ಎಂದು ತಿಳಿದಿದೆ. ಹೇಗೆಂದು ನಾನು ಹೇಳುವ ಆವಶ್ಯಕತೆಯಿಲ್ಲ. ನೀವೆಲ್ಲರೂ ಅದರ ಅನೇಕ ಮಾರ್ಗಗಳನ್ನು ಅರಿತಿದ್ದೀರಿ. ಆದರೆ, ಹಿಂದೂಗಳು ಮೂಲ ಮಂತ್ರವಾದ ಓಂಕಾರವನ್ನು ಉಚ್ಚರಿಸುತ್ತಾರೆ. ಆಮೆನ್ ಪದ ಬಂದಿರುವುದು ಓಂ ಪದದಿಂದಲೇ. ಆಮೆನ್ ಪದದಿಂದ ಬಂದಿದೆ ಆಮಿನ್ ಎಂಬ ಪದ. ಓಂಕಾರದ ಉಚ್ಚಾರದೊಂದಿಗೆ ಈ ಭಾಷಣವನ್ನು ಮುಗಿಸೋಣ. ನಾವೆಲ್ಲರೂ ಉಚ್ಚರಿಸೋಣ. ಓಂ ಸಾರ್ವತ್ರಿಕವಾದುದು. ( ರಾಗಬದ್ಧವಾಗಿ ಓಂಕಾರ ಉಚ್ಚಾರಣೆ ಆರಂಭಗೊಳ್ಳುತ್ತದೆ.)

**ಹರಿ ಓಂ, ಹರಿ ಓಂ, ಹರಿ ಓಂ, ಹರಿ ಓಂ** ॐ